ದಿಃ 15.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಆರ್.ಸಿ.ಎಸ್ ರವರಿಂದ**

2 ನೇ ಪ್ರತಿವಾದಿ ಕೊಂಡರಡ್ಡಿಪಲ್ಲಿಯಲ್ಲಿ ವಾಸವಾಗಿದ್ದಾರೆ. ನನ್ನ ಅಜ್ಜಿಯ ಹೆಸರು ಕದೀರಮ್ಮಾ. ನನ್ನ ಅಜ್ಜಿಯ ಹೆಸರು ನಾಗಮ್ಮಾ ಎಂದರೆ ಸರಿಯಲ್ಲ. ನನ್ನ ತಾತಾ ನಾಗಪ್ಪಾ ರವರ ಅಣ್ಣ ತಮ್ಮಂದಿರು ಎಷ್ಟು ಜನ ಗೊತ್ತಿಲ್ಲ. 4 ಜನ ಅಣ್ಣ ತಮ್ಮಂದಿರು ಎಂದರೆ ಸರಿ. ನಾಗಪ್ಪ ರವರಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರೂ ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳ ಹೆಸರು ಗಂಗರತ್ನಮ್ಮಾ ಲಕ್ಷ್ಮೀ ನರಸಮ್ಮಾ. ನಾಗಪ್ಪ ರವರ ಇಬ್ಬರು ಹೆಣ್ಣು ಬಮಕ್ಕ ಳ ಹೆಸರು ಚಿನ್ನಮ್ಮಾಯ್ಯಾ ಮತ್ತು ನಾರಾಯಣಮ್ಮಾ ಎಂದರೆ ಸರಿಯಲ್ಲ.

2. ಚಿನ್ನಮ್ಮಯ್ಯಾ ರವರನ್ನು ಶಿಡ್ಲಘಟ್ಟಕ್ಕೆ ಮದುವೆ ಮಾಡಿ ಕೊಡಲಾಗಿದೆ. ಅವರನ್ನು ಗೋರಂಟ್ಲಕ್ಕೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿಯಲ್ಲ. ಚಿನ್ನಮ್ಮಯ್ಯಾ ಶಿಡ್ಲಘಟ್ಟಕ್ಕೆ ದಲ್ಲಿ ವಾಸವಾಗಿದ್ದಾರೆ. ಅವರ ಗಂಡ ಜೀವಂತ ಇದ್ದಾರೆ. ಚಿನ್ನಮ್ಮಯ್ಯಾ ರವರ ಗಂಡ 10 ವರ್ಷಗಳ ಹಿಂದೆ ಮೃತ ಪಟ್ಟಿದ್ದು ಅವರ ಹೆಂಡತಿ ಮಕ್ಕ ಳ ಜೊತೆ ಕೊಂಡರೆಡ್ಡಿ ಪಲ್ಲಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

3. ಚಿನ್ನಮ್ಮಯ್ಯಾ ರವರಿಗೆ ಇಬ್ಬರೂ ಗಂಡು ಮಕ್ಕಳು. ಅವರೆಂದರೆ ಹರೀಶ ಮತ್ತು ಇನ್ನೊಬ್ಬರ ಹೆಸರು ಗೊತ್ತಿಲ್ಲ. ಚಿನ್ನಮ್ಮಯ್ಯಾ ರವರ ಇಬ್ಬರ ಮಕ್ಕಳ ಹೆಸರು ಗಂಗಾಧರ, ಲಕ್ಷೀನರಸಮ್ಮಾ ಮತ್ತು ಅಮರಮ್ಮಾ ಎಂದರೆ ಸರಿಯಲ್ಲ. ನಾರಾಯಣಮ್ಮಾರವರನ್ನು ಕೊಂಡರೆಡ್ಡಿ ಪಲ್ಲಿಗೆ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ. ಅವರನ್ನು ಗುಡಿಬಂಡೆ ತಾಲ್ಲೂಕಿನ ಹಳ್ಳಿಗೆ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾರಾಯಣಮ್ಮಾ ರವರ ಗಂಡ ಬದುಕಿದ್ದಾರೆ.

4. ನಾರಾಯಣಮ್ಮಾ ರವರ ಗಂಡ 15 ವರ್ಷಗಳ ಹಿಂದೆ ಮೃತ ಪಟ್ಟಿದ್ದಾರೆ ಎಂದರೆ ಸರಿಯಲ್ಲ. ನಾರಾಯಣಮ್ಮಾ ರವರಿಗೆ 1 ಹೆಣ್ಣು ಮಗು ಇದ್ದು ಅದು ಮೃತ ಪಟ್ಟಿದೆ. ಹೆಣ್ಣು

ಮಗು ಈಗಲೂ ಜೀವಂತ ಇದ್ದಾರೆ ಎಂದರೆ ಸರಿಯಲ್ಲ.  ನಾಗಪ್ಪನ 2 ನೇ ಮಗನ ಹೆಸರು ನರಸಿಂಹಪ್ಪಾ ಅಲ್ಲ ಚಿನ್ನಪ್ಪ ಉರ್ಫ್ ನಾರಾಯಣಪ್ಪಾ ಎಂದರೆ ಸರಿಯಲ್ಲ. ನರಸಿಂಹಪ್ಪಾ ರವರಿಗೆ ಇಬ್ಬರು ಮಕ್ಕಳು.  ನರಸಿಂಹಪ್ಪಾ ರವರಿಗೆ ಒಂದು ಗಂಡು ಹೆಣ್ಣು ಮಗು ಮತ್ತು ಒಂದು ಗಂಡು ಮಗು ಇದೆ ಎಂದರೆ ಸರಿ.

5. ನರಸಿಂಹಪ್ಪಾ ರವರ ಮಗಳನ್ನು ದೊಡ್ಡಬಳ್ಳಾ ಪುರಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಅದು ನಾನೇ. ಗಂಡು ಮಗು ಪ್ರಥಮ ಪಿಯುಸಿ ಮಾಡುತ್ತಿದ್ದಾನೆ.  ಒಟ್ಟು ಕುಟುಂಬದ ಸಂಬಂಧ ತೋರಿಸಲು ವಂಶವೃಕ್ಷ ಪ್ರಮಾಣ ಪತ್ರ ಹೊರತು ಪಡಿಸಿ ಬೇರೆ ದಾಖಲೆ ಹಾಜರು ಪಡಿಸಿಲ್ಲ. 1 ನೇ ಪ್ರತಿವಾದಿಗೆ 4 ಜನ ಹೆಣ್ಣು ಮಕ್ಕಳು 1 ಗಂಡು ಮಗು ಇದೆ. 2 ನೇ ಪ್ರತಿವಾದಿಯ ಮಗ ಗಂಗರಾಜು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ನರಸಿಂಹಪ್ಪಾ ರವರ ಮಗನೆಂದು ಗಂಗರಾಜರವರನ್ನು ತೋರಿಸಿ ಇವರು ನರಸಿಂಹಪ್ಪನ ಮಗ ಎಂದು ಹೇಳಿದ್ದು, ಸಾಕ್ಷಿಯು ಗಂಗರಾಜು ರವರ ನರಸಿಂಹಪ್ಪಾ ರವರ ಮಗ ಅಲ್ಲ ಎಂದು ನುಡಿಯುತ್ತಾರೆ.

6. ಕೋಂಡರೆಡ್ಡಿಪಲ್ಲಿಯಲ್ಲಿ ನಾನು ಶಾಲೆಗೆ ಸೇರಿದ್ದೇನೆ.  ಈ ಬಗ್ಗೆ ದಾಖಲು ಹಾಜರುಪಡಿಸಿಲ್ಲ.  ದಾವಾ ಸ್ವತ್ತು ಸರ್ವೆ ನಂ. 115/2  2 ಎಕರೆ ಇರುತ್ತದೆ.  ಮೊದಲು ದಾವಾ ಸ್ವತ್ತು ಯಾರಿಗೆ ಸೇರಿತ್ತು ಗೊತ್ತಿಲ್ಲ. ಯಾರಿಗೆ ಮಂಜೂರಾಗಿತ್ತು ಗೊತ್ತಿಲ್ಲ. ದಾವಾ ಸ್ವತ್ತು ಚೆಕ್ಕು ಬಂದಿ ಹೇಳಲಾಗುವುದಿಲ್ಲ. ದಾವಾ ಸ್ವತ್ತನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನನಗೂ ಮತ್ತು ದಾವಾ ಸ್ವತ್ತಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ನಾಗಪ್ಪ ರವರ ಕುಟುಂಬಕ್ಕೆ ಸಂಬಂಧವಿಲ್ಲ ಎಂರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ.,
ಬಾಗೇಪಲ್ಲಿ